ವಂಚನೆಗೂ ದಾರಿ ಮಾಡಿಕೊಡುತ್ತದೆ. ಇಲ್ಲಿ ಕರೆ ಸ್ವೀಕರಿಸಿದವರನ್ನು ಮರುಳು ಮಾಡುವ ಸೋಷಿಯಲ್ ಎಂಜಿನಿಯರಿಂಗ್ ನಡೆಯುತ್ತದೆ. ಆ ಮೂಲಕ ಆಧಾರ್, ಪ್ಯಾನ್ ಕಾರ್ಡ್ ಸಂಖ್ಯೆ, ಪಿನ್ ಹಾಗೂ ಪಾಸ್‌ವರ್ಡ್, ಡೆಬಿಟ್ ಅಥವಾ ಕ್ರೆಡಿಟ್ ಕಾರ್ಡ್ ಮತ್ತು ಅದರ ಸಿವಿವಿ ಮಾಹಿತಿ ಇತ್ಯಾದಿಗಳನ್ನು ಹೆಕ್ಕಿ ತೆಗೆಯಲಾಗುತ್ತದೆ.

ಕಸ್ಟಮರ್ ಕೇರ್ ನೆರವು ಎಂಬ ಹೆಸರಿನಲ್ಲಿ ವಂಚನೆಯ ಜಾಲವೇ ಹಬ್ಬಿದೆ. ಕಸ್ಟಮರ್ ಕೇರ್ ನಂಬರ್‌ಗಳು ನಮ್ಮ ಇಮೇಲ್, ಎಸ್‌ಎಂಎಸ್, ಫೇಸ್‌ಬುಕ್ ಜಾಹೀರಾತು ಇಲ್ಲವೇ ಹುಡುಕಾಟ ಮಾಡುವ ವೆಬ್‌ಸೈಟ್ – ಹೀಗೆ ಎಲ್ಲೆಡೆ ನೋಡಸಿಗುತ್ತವೆ. ಬೆಂಗಳೂರಿನ ಒಂದು ಸೈಬರ್ ಭದ್ರತಾ ಸಂಸ್ಥೆ 'ಕ್ಲೌಡ್‌ಎಸ್‌ಇಕೆ' ನಡೆಸಿದ ಸಮೀಕ್ಷೆ ಅನ್ವಯ, 31 ಸಾವಿರಕ್ಕೂ ಅಧಿಕ ವಂಚಕರ ಸಂಖ್ಯೆಗಳು ಇವೆ. ಅನೇಕ ಸಂಖ್ಯೆಗಳು ಸುಮಾರು ಎರಡು ವರ್ಷಗಳಿಂದಲೂ ಚಾಲ್ತಿಯಲ್ಲಿವೆ. ಇವುಗಳಲ್ಲಿ ಶೇ. 88ರಷ್ಟು ಸಂಖ್ಯೆಗಳು ಫೇಸ್‌ಬುಕ್ ಜಾಹೀರಾತು ಮೂಲಕ ಬಿತ್ತರಗೊಳ್ಳುತ್ತವೆ.

ವಂಚಕರಿಗೆ ಒಮ್ಮೆ ಕರೆ ಸ್ವೀಕರಿಸಿದವರ ಮೇಲೆ ಹಿಡಿತ ಸಿಕ್ಕಿತೆಂದರೆ, ನಂತರ ವಾಟ್ಸ್‌ಆ್ಯಪ್ ಅಥವಾ ಟೆಲಿಗ್ರಾಂ ಮೂಲಕ ಸಂಭಾಷಣೆಗೆ ನಮ್ಮನ್ನು ಎಳೆಯುತ್ತಾರೆ. ದೂರದಲ್ಲಿದ್ದುಕೊಂಡೇ ನಾವು ಬಳಸುವ ಡಿಜಿಟಲ್ ಸಾಧನದ ಮೇಲೆ ನಿಯಂತ್ರಣ ಸಾಧಿಸುವ ಎನಿಡೆಸ್ಕ್, ರಸ್ಟ್‌ಡೆಸ್ಕ್, ಐಎಸ್‌ಎಲ್ ಲೈಟ್, ಟೀಮ್‌ವೀವರ್ ಅಥವಾ ರಿಮೋಟ್ ರಿಪ್ಪಲ್ ಇನ್‌ಸ್ಟಾಲ್ ಮಾಡಿಕೊಳ್ಳಲು ಹೇಳುತ್ತಾರೆ. ಅದಾದ ನಂತರ ಟೋಕನ್ ಮೊತ್ತವಾಗಿ ₹10 ಅನ್ನು ಪಾವತಿಸಲು ಹೇಳುತ್ತಾರೆ. ಈ ಸಂದರ್ಭದಲ್ಲಿ ನಮ್ಮ ಪಿನ್ ಮೇಲೆಯೇ ಅವರ ನಿಗಾ ಇರುತ್ತದೆ. ಅದು ಲಭ್ಯವಾಗುತ್ತಿದ್ದಂತೆ, ಖಾತೆಯಲ್ಲಿರುವ ಹಣ ತನ್ನಿಂತಾನೆ ವರ್ಗಾವಣೆ ಆರಂಭವಾಗುತ್ತದೆ.

## ವಂಚನೆಗೆ ನೆರವಾದ ಕೃತಕ ಬುದ್ಧಿಮತ್ತೆ

ರಶ್ಮಿಕಾ ಮಂದಣ್ಣ ಅವರ ಡೀಪ್‌ಫೇಕ್ ಚಿತ್ರದ ನಂತರ ಕೃತಕ ಬುದ್ಧಿಮತ್ತೆಯ ಕುಕೃತ್ಯದ ಪರಿಚಯ ಸಾಮಾನ್ಯರಿಗೂ ಆಯಿತು. ಆದರೆ ಇದರಂತೆಯೇ ಡೀಪ್‌ನ್ಯೂಡ್ ಎಂಬ ತಂತ್ರಜ್ಞಾನವೂ ಇದೆ. ಅಂದರೆ ವ್ಯಕ್ತಿಯ ಚಿತ್ರ ಬಳಸಿ ಅದನ್ನು ಮತ್ತೊಬ್ಬರ ಚಹರೆಗೆ ಜೋಡಿಸಿ, ಬೆದರಿಸಿ ವಂಚಿಸುವ ಕೃತ್ಯ ಇತ್ತೀಚಿನ ದಿನಗಳಲ್ಲಿ ವ್ಯಾಪಕವಾಗಿದೆ.

ಧಾರವಾಡದ ವ್ಯಕ್ತಿಯೊಬ್ಬರ ಫೋನ್‌ಗೆ ಅಪರಿಚಿತ ಸಂಖ್ಯೆಯಿಂದ ಒಂದು ವಾಟ್ಸ್‌ಆ್ಯಪ್ ವಿಡಿಯೊ ಕರೆ ಬರುತ್ತದೆ. ಕೆಲವು ಸೆಕೆಂಡುಗಳ ಕಾಲ ಯುವತಿಯೊಬ್ಬಳು ಮಾತನಾಡುತ್ತಾಳೆ. ಅಪರಿಚಿತ ಕರೆಯಾದ್ದರಿಂದ 'ರಾಂಗ್ ನಂಬರ್. ನೀವು ಯಾರೂ ಅಂತ ನಂಗೊತ್ತಿಲ್ರೀ' ಎಂದು ಈ ಬದಿಯ ವ್ಯಕ್ತಿ ಕರೆ ಸ್ಥಗಿತಗೊಳಿಸುತ್ತಾರೆ. ಅದಾಗಿ ಕೆಲವೇ ಹೊತ್ತಿನಲ್ಲಿ ಆತನ ವಾಟ್ಸ್‌ಆ್ಯಪ್‌ಗೆ ವಿಡಿಯೊ ಒಂದು ಕಳುಹಿಸಲಾಗುತ್ತದೆ. ಅದರಲ್ಲಿ ಆತ ಸಂಪೂರ್ಣ ಬೆತ್ತಲಾಗಿದ್ದಾನೆ. ಯುವತಿ ಆತನನ್ನು ಲೈಂಗಿಕವಾಗಿ ಪ್ರಚೋದಿಸುತ್ತಿರುವ ದೃಶ್ಯ ಇದೆ. ಅದರ ಬೆನ್ನ ಹಿಂದೆಯೇ ಮತ್ತೊಂದು ಕರೆ ಬರುತ್ತದೆ. ₹10 ಲಕ್ಷ ಹಣ ಕೊಡದಿದ್ದರೆ ಈ ವಿಡಿಯೊ ನಿನ್ನ ಫೇಸ್‌ಬುಕ್, ವಾಟ್ಸ್‌ಆ್ಯಪ್ ಹೀಗೆ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತದೆ ಎಂದು ಬೆದರಿಕೆಯೊಡ್ಡುತ್ತಾರೆ.

ಬೆತ್ತಲೆ ಚಿತ್ರಗಳ ಮೂಲಕ ಬೆದರಿಕೆಗೆ ಒಳಗಾಗುವವರಲ್ಲಿ ಪ್ರಾಧ್ಯಾಪಕರು, ನಿವೃತ್ತರು, ವೈದ್ಯರು ಸೇರಿದಂತೆ ಹಲವರು ಹಣ ಕಳೆದುಕೊಂಡಿದ್ದಾರೆ. ಕೆಲವರು ಮರ್ಯಾದೆಗೆ ಅಂಜಿ ಪ್ರಾಣ ಕಳೆದುಕೊಂಡಿದ್ದೂ ಉಂಟು.

ಅಧಿಕಾರಿಗಳ ಹೆಸರಿನಲ್ಲಿ ಕರೆ ಮಾಡುವ ಕೃತಕ ಬುದ್ಧಿಮತ್ತೆಯೂ ಬಳಕೆಯಲ್ಲಿದೆ. ನಿಮಗೊಂದು ಪಾರ್ಸಲ್ ಬಂದಿದೆ. ಆದರೆ ಅದರಲ್ಲಿ ಮಾದಕದ್ರವ್ಯವಿದೆ. ಪ್ರಕರಣ ಗಂಭೀರ ಸ್ವರೂಪ ಪಡೆಯಬಾರದೆಂದರೆ ಇಂತಿಷ್ಟು ಹಣ ನೀಡಬೇಕು ಎಂಬ ಷರತ್ತು ಮುಂದಿಡಲಾಗುತ್ತದೆ.

## ದೋಚುವ ಹಣ ಹೋಗುವುದೆಲ್ಲಿಗೆ?

ಒಂದು ಖಾತೆಯಿಂದ ಮತ್ತೊಂದು ಖಾತೆಗೆ ಸ್ವಿಫ್ಟ್ ಟ್ರಾನ್ಸ್‌ಫರ್ ಮೂಲಕ ಹಣ ವರ್ಗಾವಣೆಯಾಗುತ್ತದೆ. ಅಂದರೆ ವಂಚಕರ ಜಾಲವು ಕಡು ಬಡವರಿಗೆ ಒಂದಷ್ಟು ಹಣ ಕೊಟ್ಟು, ಅವರ ಕೆವೈಸಿ ದಾಖಲೆ ಪಡೆದು ಬ್ಯಾಂಕ್ ಖಾತೆ ತೆರೆಯುತ್ತಾರೆ. ಇವರು ಹುಡುಕುವ ಜನರು ದೂರದ ಊರಿನಲ್ಲಿರುವವರು. ಅಲ್ಲಿ ಇಂಟರ್‌ನೆಟ್ ಸೌಕರ್ಯವೂ ಇಲ್ಲದ ಪ್ರದೇಶದಲ್ಲಿರುವವರೇ ಆಗಿರುತ್ತಾರೆ. ಇದಕ್ಕೆ ಜನಧನ ಯೋಜನೆ ಖಾತೆಗಳನ್ನೇ ಹೆಚ್ಚಾಗಿ ಬಳಸಿದ ಉದಾಹರಣೆಗಳಿವೆ. ಇಂಥ ಖಾತೆಗಳನ್ನು ಬಾಡಿಗೆಗೆ ಪಡೆದ ಪ್ರಕರಣಗಳನ್ನೂ ಪೊಲೀಸರು ಪತ್ತೆ ಮಾಡಿದ್ದಾರೆ.

ಜನರಲ್ಲಿ ಜಾಗೃತಿಯ ಕೊರತೆಯಿಂದಾಗಿಯೇ ಸೈಬರ್ ಅಪರಾಧಗಳ ಸಂಖ್ಯೆ ಹೆಚ್ಚಾಗಿದೆ. ಪಾಸ್‌ವರ್ಡ್, ಪಿನ್ ಸಂಖ್ಯೆ, ಒಟಿಪಿ ಬಳಸಿ ಲಪಟಾಯಿಸಿದ ಹಣ ಒಮ್ಮೆ ಹೋದರೆ ಮತ್ತೆ ಸಿಗದು. ಹಣ ಪಾವತಿಗೆ ಬ್ಯಾಂಕುಗಳು ಎರಡು ಹಂತದ ಭದ್ರತೆ ಒದಗಿಸುತ್ತವೆ. ಆದರೆ ವಂಚಕರೊಂದಿಗೆ ಒಟಿಪಿ ಹಂಚಿಕೊಂಡು ಗ್ರಾಹಕರು ಹಣ ಕಳೆದುಕೊಳ್ಳುತ್ತಿದ್ದಾರೆ ಎನ್ನುವುದು ಅಧಿಕಾರಿಗಳ ಮಾತು.

